APRIL 20, 2025

**AKASHAVANI - DHARWAD**

**PRADESH SAMACHARA (KANNADA) 07.05 A.M.**

<><><>

**ಆಕಾಶವಾಣಿ**

**ಪ್ರದೇಶ ಸಮಾಚಾರ**

<><><>

**ಮುಖ್ಯಾಂಶಗಳು**

<><><>

- **ಜನತಾ ದರ್ಶನ, ಬಹಿರಂಗ ಸಂಸತ್ ಅಧಿವೇಶನ – ಸಚಿವ ಎಚ್.ಕೆ. ಪಾಟೀಲ.**

- **ನ್ಯಾ ’ನಲ್ ಇನ್ಸ್ಟಿಟ್ಯೂಟ್ ಆಫ್ ಎಪಿಡೆಮಿ’ಯಾಲಜಿ ಯಿಂದ, ಶಿವಮೊಗ್ಗ ಜಿಲ್ಲೆಯಲ್ಲಿ, ಕ್ಯಾಸನೂರು ಫಾರೆಸ್ಟ್ ಡಿಸೀಜ್, ರಕ್ತಸಾರ ಸಮೀಕ್ಷೆ.**

- **ನಾಳೆಯಿಂದ ಜೂನ್ 4ರ ವರೆಗೆ, ರಾಷ್ಟ್ರೀಯ, ಜಾನುವಾರು ರೋಗ ನಿಯಂತ್ರಣ ಕಾರ್ಯಕ್ರಮದಡಿ, 7ನೇ ಸುತ್ತಿನ ಲಸಿಕಾ ಅಭಿಯಾನ.**
- **ಕ್ರೈಸ್ತ ಬಾಂಧವರಿಂದ, ಇಂದು, ಸಂಭ್ರಮದ ಈಸ್ಟರ್ ಸಂಡೆ ಆಚರಣೆ; ಗಣ್ಯರ ಶುಭಾಶಯ.**

<><><>

**ಈಗ ವಾರ್ತೆಗಳ ವಿವರ**

<><><>

**ಜನತಾ ದರ್ಶನ, ಬಹಿರಂಗ ಸಂಸತ್ ಅಧಿವೇಶನ ಎಂದು, ಗದಗ ಜಿಲ್ಲಾ ಉಸ್ತುವಾರಿ ಸಚಿವ, ಎಚ್.ಕೆ. ಪಾಟೀಲ ಹೇಳಿದ್ದಾರೆ. ಗದಗ ಜಿಲ್ಲೆ, ಮುಳಗುಂದದಲ್ಲಿ ‘ಜನತಾ ದರ್ಶನ ಕಾರ್ಯಕ್ರಮ’ಕ್ಕೆ ಚಾಲನೆ ನೀಡಿ, ಮಾತನಾಡಿದರು. ಸರ್ಕಾರದ ಸೌಲಭ್ಯಗಳು, ನೇರವಾಗಿ ಅರ್ಹ ಫಲಾನುಭವಿಗಳಿಗೆ ತಲುಪಬೇಕು; ದಲ್ಲಾಳಿಗಳ ಮಧ್ಯಪ್ರವೇಶ ಇಲ್ಲದೇ, ನೈಜ ಜನಪರ ಆಡಳಿತವೇ, ಸರ್ಕಾರದ ಗುರಿ ಎಂದರು. ಗದಗ ಜಿಲ್ಲೆಯಲ್ಲಿ, ಖಾತ್ರಿ ಯೋಜನೆಗಳ ಅನುಷ್ಠಾನದಲ್ಲಿ, ಶೇಕಡ 98ರ ಷ್ಟ ಗುರಿ ಸಾಧನೆಯಾಗಿದೆ. ಪ್ರತಿ ಕುಟುಂಬಕ್ಕೆ, ತಿಂಗಳಿಗೆ 6 ಸಾವಿರ ರೂಪಾಯಿ ಮೌಲ್ಯದ ಸೌಲಭ್ಯಗಳು ತಲುಪುತ್ತಿವೆ ಎಂದರು.**

<><><>

**ಭಾರತೀಯ ವೈದ್ಯಕೀಯ ಸಂಶೋಧನಾ ಮಂಡಳಿಯ, ನ್ಯಾ ’ನಲ್ ಇನ್ಸ್ಟಿಟ್ಯೂಟ್ ಆಫ್ ಎಪಿಡೆಮಿಯಾಲಜಿ ವಿಭಾಗ, ಶಿವಮೊಗ್ಗ ಜಿಲ್ಲೆಯಲ್ಲಿ, ಕ್ಯಾಸನೂರು ಫಾರೆಸ್ಟ್ ಡಿಸೀಜ್, ಸೀರೋ ಸರ್ವೆ, ರಕ್ತಸಾರ ಸಮೀಕ್ಷೆ ಕೈಗೊಂಡಿದೆ. ಶಿವಮೊಗ್ಗದ ಸುಬ್ಬಯ್ಯ ವೈದ್ಯಕೀಯ ವಿಜ್ಞಾನ ಸಂಸ್ಥೆಯ ಸಮುದಾಯ ವೈದ್ಯಕೀಯ ವಿಭಾಗ ಹಾಗೂ ರಾಜ್ಯ ಆರೋಗ್ಯ ಇಲಾಖೆ, ರಾಜ್ಯದ ಎಂಟು ಜಿಲ್ಲೆಗಳ 51 ಗ್ರಾಮಗಳಲ್ಲಿ, ಸೀರೋ ಸರ್ವೆ ನಡೆಸಲಿವೆ ಈ ಹಿಂದೆ ಮಂಗನಕಾಯಿಲೆ ಪ್ರಕರಣ ಕಂಡುಬಂದ, 20 ಗ್ರಾಮಗಳನ್ನು ವಿಶೇ ’ವಾಗಿ ಆಯ್ಕೆ ಮಾಡಲಾಗಿದೆ. ಮಂಗನ ಜ್ವರ ಎಂದು ಕರೆಯಲ್ಪಡುವ ಕಾಯಿಲೆ,**

ಪಶ್ಚಿಮಘಟ್ಟದ ಅರಣ್ಯ ಪ್ರದೇಶಗಳಲ್ಲಿ ವಾಸಿಸುವ ಜನರಲ್ಲಿ ನಿರಂತರವಾಗಿ ಕಾಣಿಸಿಕೊಳ್ಳುತ್ತಿದೆ. ಆರಂಭದಲ್ಲಿ ಶಿವಮೊಗ್ಗ ಜಿಲ್ಲೆಯಲ್ಲಿ ಮಾತ್ರ ಕಂಡುಬಂದಿದ್ದ ಈ ಕಾಯಿಲೆ, ಇತರೆ ಜಿಲ್ಲೆ ಹಾಗು ಪಕ್ಕದ ರಾಜ್ಯಗಳಲ್ಲಿಯೂ ಹರಡಿದೆ.

<><><>

ಪಶ್ಚಿಮಘಟ್ಟದ ಗ್ರಾಮೀಣ ಪ್ರದೇಶಗಳಲ್ಲಿ ವಾಸಿಸುವ ಮಕ್ಕಳು ಹಾಗೂ ವಯಸ್ಕರಲ್ಲಿ ರಕ್ತಸಾರ ಸಮೀಕ್ಷೆ ನಡೆಸುತ್ತಿದೆ. ಕರ್ನಾಟಕ, ಮಹಾರಾ ್ಟ್ರ, ಗೋವಾ, ಕೇರಳ ಮತ್ತು ತಮಿಳುನಾಡು ಸೇರಿದಂತೆ, ಐದು ರಾಜ್ಯಗಳಲ್ಲಿ ಸಮೀಕ್ಷೆ ನಡೆಯಲಿದೆ.

<><><>

ಕ್ಯಾಸನೂರು ಫಾರೆಸ್ಟ್ ಡಿಸೀಸ್, ಕೆ.ಎಫ್.ಡಿ. ಮಂಗನ ಕಾಯಿಲೆಯಿಂದ ಬಳಲುತ್ತಿದ್ದ, 8 ವರ್ಷದ ಬಾಲಕನೋರ್ವ ಸಾವನ್ನಪ್ಪಿದ, ವರದಿ ಬಂದಿದೆ. ಶಿವಮೊಗ್ಗ ಜಿಲ್ಲೆಯಲ್ಲಿ, ಈ ವ ್ಷ ಇದು ಎರಡನೇ ಪ್ರಕರಣ. ತೀರ್ಥಹಳ್ಳಿ ತಾಲೂಕು, ಕೋಣಂದೂರು ಬಳಿಯ, ದತ್ತರಾಜಪುರ ಗ್ರಾಮದ ರಚಿತ್, ಮೃತಪಟ್ಟ ಬಾಲಕ. 15 ದಿನಗಳ ಹಿಂದೆ, ರಚಿತ್ ಹಾಗೂ ಆತನ ಸಹೋದರಿಗೆ, ಮಂಗನ ಕಾಯಿಲೆ ಸೋಂಕು ದೃಢಪಟ್ಟಿತ್ತು.

<><><>

ಮಣಿಪಾಲ ಆಸ್ಪತ್ರೆಗೆ ದಾಖಲಿಸಿ, ಚಿಕಿತ್ಸೆ ನೀಡಲಾಗುತ್ತಿತ್ತು. ಪ್ರಕರಣದ ಸಮಗ್ರ ವರದಿ ನೀಡುವಂತೆ, ಜಿಲ್ಲಾಧಿಕಾರಿ ಗುರುದತ್ತ ಹೆಗಡೆ, ಸೂಚಿಸಿದ್ದಾರೆ.

<><><>

ಜಿಲ್ಲಾ ಉಸ್ತುವಾರಿ ಸಚಿವ ಮಧು ಬಂಗಾರಪ್ಪ, ಕೆ.ಎಫ್.ಡಿ ಕಾಯಿಲೆ ನಿಯಂತ್ರಣಕ್ಕೆ, ಸಮರ್ಪಕ ಮುಂಜಾಗ್ರತಾ ಕ್ರಮಕೈಗೊಳ್ಳಲು, ಜಿಲ್ಲಾಡಳಿತಕ್ಕೆ ನಿರ್ದೇಶನ ನೀಡಿದ್ದಾರೆ.

<><><>

ವಿಶ್ವ ಯಕೃತ್ ದಿನವನ್ನು, 'ಆಹಾರವೇ ಔ ್ಧ' ಧ್ಯೇಯದೊಂದಿಗೆ, ಆಚರಿಸಲಾಯಿತು. ಹೊಸ ದಿಲ್ಲಿಯ, ಯಕೃತ್ ಮತ್ತು ಪಿತ್ತರಸ ವಿಜ್ಞಾನ ಸಂಸ್ಥೆ, 'ಆರೋಗ್ಯಕರ ಯಕೃತ್ತು; ಆರೋಗ್ಯಕರ ಭಾರತ' ಕಾರ್ಯಕ್ರಮವನ್ನು, ಆಯೋಜಿಸಿತ್ತು. ಸಮತೋಲಿತ ಆಹಾರ ಮತ್ತು ಉತ್ತಮ ಆಹಾರದ ಆಯ್ಕೆ, ಯಕೃತ್ತಿನ ಕಾಯಿಲೆಗಳನ್ನು ತಡೆಗಟ್ಟುವಲ್ಲಿ ಮಹತ್ವದ ಪಾತ್ರ ವಹಿಸುತ್ತದೆ. ಯಕೃತ್ತಿನ ಕಾಯಿಲೆಗಳ ಬಗ್ಗೆ ಜಾಗೃತಿ ಮೂಡಿಸಿ, ಎಣ್ಣೆ ಮತ್ತು ಜಿಡ್ಡಿನ ಆಹಾರ ಮಿತಗೊಳಿಸಿ, ಆರೋಗ್ಯಕರ ಜೀವನ ಶೈಲಿಯನ್ನು ಅಳವಡಿಸಿಕೊಳ್ಳುವಂತೆ, ಜನ ಜಾಗ್ರತಿ ಮೂಡಿಸಲಾಯಿತು.

<><><>

ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು, ಆಕಾಶವಾಣಿಯ ಜನಪ್ರಿಯ ಮನ್ ಕಿ ಬಾತ್‌ನ 119ನೇ ಸಂಚಿಕೆಯಲ್ಲಿ, ಈ ವಿಚಾರಕ್ಕೆ ಒತ್ತು ನೀಡಿದ್ದರು.

<><><>

ರಾಜ್ಯದ ಕರಾವಳಿ ತೀರಗಳಲ್ಲಿ, ಪ್ರಸ್ತುತ ಲಭ್ಯವಿರುವ ಬಂದರುಗಳನ್ನು ಮೇಲ್ದರ್ಜೆಗೇರಿಸುವ ಅಥವಾ ಪೂರ್ಣ ಪ್ರಮಾಣದಲ್ಲಿ ಬಳಸಿಕೊಳ್ಳಲು ಆದ್ಯತೆ ನೀಡಬೇಕು; ಹೊಸ ಬಂದರು ನಿರ್ಮಿಸಲು ಹೋಗಿ, ಮೀನುಗಾರಿಕೆ ಅವಲಂಬಿಸಿರುವ, ಮೀನುಗಾರರ ಕುಟುಂಬಗಳನ್ನು ಅತಂತ್ರ ಸ್ಥಿತಿಗೆ ನೂಕಿ, ನಿರಾಶ್ರಿತಗೊಳಿಸಿದಲ್ಲಿ, ಈ ಹಿಂದೆ ಪುನರ್ವಸತಿ ಗೊಳಿಸಲಾಗದ ಸಮಸ್ಯೆಗಳು ಮತ್ತೆ ಮುನ್ನೆಲೆಗೆ ಬರಲಿವೆ ಎಂದು, ಉತ್ತರಕನ್ನಡ ಜಿಲ್ಲೆ, ಕುಮಟಾದ ಕಡಲ ಜೀವಶಾಸ್ತ್ರಜ್ಞ ಪ್ರೊಫೆಸರ್ ವಿ.ಎನ್. ನಾಯಕ್ ತಿಳಿಸಿದ್ದಾರೆ. ಸಮುದ್ರ ಹಾಗೂ ನದಿ ತೀರಗಳಲ್ಲಿ, ಅಭಿವೃದ್ಧಿ ಕಾಮಗಾರಿ ಕೈಗೊಳ್ಳುವಾಗ, ಅವಲಂಬಿಸಿದ ಮೀನುಗಾರರ ಬದುಕಿಗೆ ಆದ್ಯತೆ ನೀಡುವುದು ಅವಶ್ಯ ಎಂದು, ಅವರು, ಮನವಿ ಮಾಡಿದ್ದಾರೆ.

<><><>

ಪ್ರೊ. ವಿ.ಎನ್. ನಾಯಕ್ ಧ್ವನಿ 45 ಸೆಕೆಂದುಗಳು

<><><>

ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..

<><><>

ಆಕಾಶವಾಣಿ ಸುದ್ದಿಗಳಿಗಾಗಿ, ನಮ್ಮ x ಖಾತೆ @airnews_dharwad ಹಾಗೂ

ನಮ್ಮ ಫೇಸ್ಬುಕ್ ಖಾತೆ Airrnu Dharwad ಅನುಸರಿಸಿ.

<><><>

ಮೇ 1 ರಿಂದ ನಾಲ್ಕರ ವರೆಗೆ, ಮುಂಬೈಯಲ್ಲಿ, ವಿಶ್ವ ಶ್ರಾವ್ಯ ದೃಶ್ಯ ಹಾಗೂ ಮನೋರಂಜನಾ ಕಾರ್ಯಕ್ರಮ, 'ವೇವ್ಸ್' ಆಯೋಜಿತವಾಗಿದ್ದು, ಸೃಜನಶೀಲ ಕಂಟೆಂಟ್ ನಿರ್ಮಾತೃಗಳಿಂದ, ಆರ್ಥಿಕತೆ ಹಲವು ಮೂಲಭೂತ ಬದಲಾವಣೆಗಳನ್ನು ಕಾಣಲಿದೆ ಎಂದು, ಕೇಂದ್ರದ ಮಾಹಿತಿ ಮತ್ತು ಪ್ರಸಾರ ಖಾತೆ ಸಚಿವ ಅಶ್ವಿನಿ ವೈಷ್ಣವ ತಿಳಿಸಿದ್ದಾರೆ. ಮುಂಬೈಯಲ್ಲಿ ರಾಷ್ಟ್ರ ಮಟ್ಟದ ಹಾಗೂ ಪ್ರಾದೇಶಿಕ ಸುದ್ದಿ ಮಾಧ್ಯಮ ಪ್ರತಿನಿಧಿಗಳೊಂದಿಗೆ ಅವರು ಸಂವಾದ ನಡೆಸಿದರು. ಜಾರ್ಖಂಡ ಅಥವಾ ಕೇರಳ ರಾಜ್ಯದಿಂದ, ಪುಟ್ಟ ಹಳ್ಳಿಯೊಂದರಿಂದ, ಸೃಜನಶೀಲ ಯುವಜನತೆ ಯಾವುದೇ ದೊಡ್ಡ ಸ್ಟುಡಿಯೋ ಅಥವಾ ತಾಂತ್ರಿಕತೆ ಸಹಕಾರವಿಲ್ಲದೆ, ಜಗತ್ತಿನ ಗಮನ ಸೆಳೆಯಬಲ್ಲ ಕಂಟೆಂಟ್ ಸೃಷ್ಟಿಸಿ, ಲಕ್ಷಾಂತರ ವೀಕ್ಷಕರನ್ನು ಪಡೆಯುತ್ತಿದ್ದಾರೆ. ವೇವ್ಸ್ 2025ಕ್ಕೆ ಈಗಾಗಲೇ 1 ಲಕ್ಷಕ್ಕೂ ಅಧಿಕ ಯುವಜನತೆ ಹೆಸರು ನೋಂದಾಯಿಸಿದ್ದಾರೆ. ಡಿಜಿಟಲ್ ಕ್ಷೇತ್ರವೇ ಚಾಲಕ ಶಕ್ತಿಯಾಗಿದ್ದು, ಸರ್ಕಾರ ಕೇವಲ ಪೋಷಕ ಪಾತ್ರ ವಹಿಸಲಿದೆ ಎಂದರು.

<><><>

ಮಾಹಿತಿ ಮತ್ತು ಪ್ರಸಾರ ಸಚಿವಾಲಯದ ಕಾರ್ಯದರ್ಶಿ ಸಂಜಯ ಜಾಜೂ ಸೇರಿದಂತೆ ಹಿರಿಯ ಅಧಿಕಾರಿಗಳು ಪಾಲ್ಗೊಂಡಿದ್ದರು.

<><><>

ರಾಷ್ಟ್ರೀಯ, ಜಾನುವಾರು ರೋಗ ನಿಯಂತ್ರಣ ಕಾರ್ಯಕ್ರಮದಡಿ, 7ನೇ ಸುತ್ತಿನ ಲಸಿಕಾ ಅಭಿಯಾನ, ನಾಳೆಯಿಂದ ಜೂನ್ 4ರ ವರೆಗೆ ನಡೆಯಲಿದೆ.

ಕಾಲು, ಬಾಯಿ ರೋಗ ಮತ್ತು ಚರ್ಮಗಂಟು ರೋಗದ ವಿರುದ್ಧ, ಲಸಿಕೆಯನ್ನು ಏಕಕಾಲಕ್ಕೆ ರಾಸುಗಳಿಗೆ ರಾಜ್ಯಾದ್ಯಂತ ಹಾಕಲಾಗುತ್ತಿದೆ.

<><><>

ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ, 8 ಸಂಚಾರಿ ಪಶು ಚಿಕಿತ್ಸಾ ಘಟಕಗಳು ಕಾರ್ಯನಿರ್ವಹಿಸುತ್ತಿವೆ. ಜನೆವರಿ ಯಿಂದ ಮಾರ್ಚ್ ಅಂತ್ಯದ ವರೆಗೆ, 3 ಸಾವಿರದ 243 ದನ, ಕರುಗಳಿಗೆ ಚಿಕಿತ್ಸೆ ನೀಡಲಾಗಿದೆ ಎಂದು, ಪಶು ಪಾಲನಾ ಇಲಾಖೆ ಉಪ ನಿರ್ದೇಶಕ ಡಾಕ್ಟರ್ ರಂಗಪ್ಪ ತಿಳಿಸಿದ್ದಾರೆ.

<><><>

ಭಗವಾನ್ ಏಸು ಕ್ರಿಸ್ತ ಜನ್ಮ ತಳೆದ, ಪುನರುತ್ಥಾನದ ದಿನವಾದ ಇಂದು, ಕ್ರೈಸ್ತ ಬಾಂಧವರು, ನಾಡಿನಾದ್ಯಂತ ಸಂಭ್ರಮ ಹಾಗೂ ಶ್ರದ್ಧಾ, ಭಕ್ತಿಯಿಂದ, ಈಸ್ಟರ್ ಸಂಡೆ ಆಚರಿಸುತ್ತಿದ್ದಾರೆ. ಕ್ರೈಸ್ತ ಬಾಂಧವರಿಗೆ, ರಾಷ್ಟ್ರಪತಿ ದ್ರೌಪದಿ ಮುರ್ಮು ಸೇರಿದಂತೆ, ಅನೇಕ ಗಣ್ಯರು, ಶುಭಾಶಯಗಳನ್ನು ಕೋರಿದ್ದಾರೆ.

<><><>

ಧಾರವಾಡ ಹೆಬಿಕ್ ಸ್ಮಾರಕ ದೇವಾಲಯದ ಸಭಾಪಾಲಕ, ರೆವರೆಂಡ್ ಸ್ಯಾಮ್ಯುಯೆಲ್ ಕ್ಯಾಲ್ವಿನ್, ಪ್ರದೇಶ ಸಮಾಚಾರಕ್ಕಾಗಿ, ತಮ್ಮ ಸಂದೇಶ ನೀಡಿದ್ದಾರೆ.

<><><>

ಸ್ಯಾಮ್ಯುಯೆಲ್ ಕ್ಯಾಲ್ವಿನ್ ಧ್ವನಿ 25 ಸೆಕೆಂದುಗಳು

<><><>

ವಿಶ್ವ ಪರಂಪರೆ ದಿನದ ಅಂಗವಾಗಿ, ಬೆಂಗಳೂರು ಜನರಲ್ ಪೋಸ್ಟ್ ಆಫೀಸ್, 'ನಮ್ಮ ದೇವಾಲಯ' ಕುರಿತ, ಆರು ಸಚಿತ್ರಗಳ ಪೋಸ್ಟ್ ಕಾರ್ಡ್ ಮತ್ತು ಕರ್ನಾಟಕದ ಶ್ರೀಮಂತ, ಸಾಂಸ್ಕೃತಿಕ ಹಾಗೂ ವಾಸ್ತು ಶಿಲ್ಪದ ಪರಂಪರೆ ಸಂಭ್ರಮಿಸುವ, ವಿಶೇ ' ಲಕೋಟೆ ಬಿಡುಗಡೆ ಮಾಡಿದೆ. ಆರು ಸಚಿತ್ರ ಪೋಸ್ಟ್ ಕಾರ್ಡ್‌ಗಳ ಸೆಟ್ ಮತ್ತು ವಿಶೇ ' ಲಕೋಟೆ, ಬೆಂಗಳೂರಿನ ಜಿ.ಪಿ.ಓ. ಸೇರಿ ಮೈಸೂರು, ಮಂಗಳೂರು ಮತ್ತು ಬೆಳಗಾವಿಯಲ್ಲಿ ಸಾರ್ವಜನಿಕರಿಗೆ ಮಾರಾಟಕ್ಕೆ ಸಿಗಲಿವೆ.

<><><>

ಈಗ ಸಂಕ್ಷಿಪ್ತ ಸುದ್ದಿಗಳು

<><><>

ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ, 'ಇಸ್ರೋ' ನಿರ್ಮಿಸಿದ, ಆರ್ಯಭಟ ಉಪಗ್ರಹ, 1975 ರಲ್ಲಿ ರಷ್ಯಾ ನೆರವಿನಿಂದ ಬಾಹ್ಯಾಕಾಶ ಪ್ರವೇಶಿಸಿ, 50 ವರ್ಷಗಳು ಪೂರ್ಣಗೊಂಡಿವೆ.

<><><>

ಸೈಬರ್ ಅಪರಾಧಿಗಳಿಂದ ವಂಚನೆಗೆ ಒಳಗಾಗಿದ್ದಲ್ಲಿ, ಜಾಲತಾಣ www.cyber crime.gov.in ನಲ್ಲಿ ವರದಿ ಮಾಡುವಂತೆ ಅಥವಾ ಸಹಾಯವಾಣಿ 1-9-3-0 ಗೆ ಕರೆ ಮಾಡಿ, ದೂರು ದಾಖಲಿಸುವಂತೆ ಕೋರಲಾಗಿದೆ.

<><><>

ಬೆಂಗಳೂರಿನ ಬಿಜೆಪಿ ಕಚೇರಿಯಲ್ಲಿ, 'ಒಂದು ರಾಷ್ಟ್ರ – ಒಂದು ಚುನಾವಣೆ' ಕುರಿತ ಕಾರ್ಯಾಗಾರ ನಡೆಯಿತು.

<><><>

ಧಾರವಾಡ ಕರ್ನಾಟಕ ವಿದ್ಯಾವರ್ಧಕ ಸಂಘದ, ಕವಿ ಬಿ.ಕೆ. ಹೊಂಗಲ್ ದತ್ತಿ, ಮಕ್ಕಳ ಶ್ರೇಷ್ಠ ಕವಿ ಪ್ರಶಸ್ತಿಗೆ, ಧಾರವಾಡದ ಮಕ್ಕಳ ಸಾಹಿತಿ ಡಾಕ್ಟರ್ ಆರ್.ಬಿ. ಚಿಲುಮಿ ಭಾಜನರಾಗಿದ್ದಾರೆ.

<><><>

ಬೆಂಗಳೂರು ಘನತ್ಯಾಜ್ಯ ನಿರ್ವಹಣೆ ನಿಯಮಿತ, ನಗರದಾದ್ಯಂತ ನಾಳೆಯಿಂದ ಮೇ 11ರ ವರೆಗೆ, ಸ್ವಚ್ಛತಾ ಅಭಿಯಾನ ಕೈಗೊಳ್ಳಲಿದೆ ಎಂದು, ಸಿ.ಇ.ಓ. ರಮಾಮಣಿ ತಿಳಿಸಿದ್ದಾರೆ.

<><><>

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ, ಅಲೆಮಾರಿ ಅಭಿವೃದ್ಧಿ ನಿಗಮದ ಅಧ್ಯಕ್ಷೆ ಪಲ್ಲವಿ ಜಿ. ಅವರು, ಕಲಬುರಗಿ ತಲುಪಿದ್ದು, ನಾಡಿದ್ದು 22 ರಂದು, ಬೆಳಗ್ಗೆ 10 ಗಂಟೆಗೆ, ಜಿಲ್ಲಾಧಿಕಾರಿ ಕಚೇರಿಯಲ್ಲಿ ಅಹವಾಲು ಆಲಿಸಲಿದ್ದಾರೆ.

<><><>

**ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:**

<><><>

- ಜನತಾ ದರ್ಶನ, ಬಹಿರಂಗ ಸಂಸತ್ ಅಧಿವೇಶನ – ಸಚಿವ ಎಚ್.ಕೆ. ಪಾಟೀಲ.

- ನ್ಯಾ ʼನಲ್ ಇನ್ಸ್ಟಿಟ್ಯೂಟ್ ಆಫ್ ಎಪಿಡೆಮಿʼಯಾಲಜಿ ಯಿಂದ, ಶಿವಮೊಗ್ಗ ಜಿಲ್ಲೆಯಲ್ಲಿ, ಕ್ಯಾಸನೂರು ಫಾರೆಸ್ಟ್ ಡಿಸೀಜ್, ರಕ್ತಸಾರ ಸಮೀಕ್ಷೆ.

- ನಾಳೆಯಿಂದ ಜೂನ್ 4ರ ವರೆಗೆ, ರಾಷ್ಟ್ರೀಯ, ಜಾನುವಾರು ರೋಗ ನಿಯಂತ್ರಣ ಕಾರ್ಯಕ್ರಮದಡಿ, 7ನೇ ಸುತ್ತಿನ ಲಸಿಕಾ ಅಭಿಯಾನ.
- ಕ್ರೈಸ್ತ ಬಾಂಧವರಿಂದ, ಇಂದು, ಸಂಭ್ರಮದ ಈಸ್ಟರ್ ಸಂಡೆ ಆಚರಣೆ; ಗಣ್ಯರ ಶುಭಾಶಯ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ.

<><><>